# ಶ್ರೀರಾಜಗೋಪಾಲದಾಸ ವಿರಚಿತ
# ಭೀಮಸೇನದೇವರ ವರ್ಣನೆ

ಭೀಮನು ಸರ್ವ ಜನ ।
ಮೋಹಿಸುವಂತ ಕಾಮಿನೀ ರೂಪವ ತೊಟ್ಟನು ।ಪ।

ಸೋಮಸಮಾನನ ತಾಮರ ಸಾಂಬಕ ।
ಹೇಮಾಂಬರ ಕಂಠೀಮಣಿಗಣಸುತ್ರಾಯ ।
ಕಾಮಿನಿಯ ಮೋಹಿಪ ಅಭಿರಾಮರೂಪ
ನಿಸ್ಸೀಮ ಬಲಾಢ್ಯ ।ಅ.ಪ।

ಬಟಕುಚಪುಟ ಕರಪುಟದಿಂಚಿದ ಹಿಗ್ಗಿಸಿ ತೀಡುತ ।
ಅಂಗುಟ ತುದಿಲೆಳೆದೆಳೆದುಟ ರಕ್ತಿಮೆಯನು ನೋಡುತ ।
ಕುಟಿಲಾಳಕನ್ಯಾವರಸುತ ಪಟುಮಾತಾಡುತ ।
ಪುಟಚಂಡ ಹಾರಿಸಿ ನಟನೆ ಮಾಡುವ ।
ಅರ್ಭಟಕಂಜಿಹ ವಿಟಪಟಲ ಹಾಂಗಿರಲದು ।
ವಟುರಿದ್ಧರು ಯತಿ ಮಠಮಂದಿರ ।
ಲಂಪಟವ ಬಿಟ್ಟು ಮಿಟಿ ಮಿಟಿ ನೋಡುವರೋ ॥ ।೧।

ಕರಿಕಲಭಗವನ ಸೊರಗಿದ ಕಟಿಕಂಠೀರವು ।
ಖಿರಲನಯನಜಿತ ಎರಳೆಗಳ್ ಮನೆಯನು ಸೇರವು ।
ಸರಸ ಸ್ವರದಿಂದ ಪರಿಭ್ರಮಿಸಿತು ಕಲಕೀರವು ।
ಸುರನರವರ ಸುಂದರಿಯರ ಚೆಲಿವಿಕೆ ಮಾರವು ।
ಹೆರಳ್ ಭಂಗಾರವು ಸರಳ್ ಮಲ್ಲಿಗೆಸರ ।
ಹರಳ್ ಕಂಕಣಬಳೆ ಸರಳ್ ಬೆರಳುಂಗುರ ।
ಅರಳ್ ಮಲ್ಲಿಗೆಸರ ಕೊರಳ್ ಗಂಧವಕೊಡು ।

ಮರುಳ್ಗೊಂಡ ಜನ ಹಗಲುಧೇನಿಪರೋ । ।೨।

ಮೃಗಮದತಿಲಕವು ಮುಗುಳ್ ನಗೆಮೊಗ ಬಿಂಬಾಧರ ।
ಝಗಯುಗದಂದದಿ ಝುಗಝುಗಿಸುತಿಯ ಪಯೋಧರ ।
ಅಘಹರ ರಾಜ ಗೋಪಾಲ ಸಖ ಪಾರ್ಥ ಸಹೋದರ ।
ಬಗೆ ಬಗೆಯಲಿ ಮನದಾಗ ಅಘಹರನ ಕೃತಾದರ ।
ಮುಗುಳ್ ಮಲ್ಲಿಗೆ ಸರ ತೆಗೆ ತೆಗೆದ್ ಹಾಕುತ ।
ಸೊಗಸು ಸುಗುಣರೂಪೊಅ ತುಗುಬುಗುಲೆನುತಿರೆ ।
ಜಗದ ಜನರ ಮನ ಭುಗಿಘುಗಿಲೆನುತಿರೆ ।
ಬಗೆಬಗೆಯಲಿ ಒಂದ್ ಹಗಲು ಯುಗವಾಗೆ । ।೩।

---

## ಭೀಮಸೇನದೇವರ ವರ್ಣನೆ

### ಕೃತಿಕಾರರು – ಶ್ರೀಪಾದರಾಜರು

ಆ ಮಾರುತನೆ ಭೀಮನೆನಿನಿ ದ್ವಾಪರಯುಗದಿ ।
ಸೋಮಕುಲದಲಿ ಜನಿಸೆ ಪಾರ್ಥರೊಡನೆ ।
ಭೀಮವಿಕ್ರಮ ರಕ್ಕಸರನು ಮುರಿದಿಕ್ಕಿದ ।
ಆ ಮಹಿಮ ನಮ್ಮ ಕುಲಗುರುರಾಯನು ।೧।
ಕರದಿಂದ ಶಿಶುಭಾವನಾದ ಭೀಮನ ಬಿಡಲು ।
ಗಿರಿಯೊಡೆದು ಶತಶೃಂಗವೆಂದೆನಿಸಿತು ।
ಹರಿಗಳನು ಹರಿಗಳಿಂ ಕರಿಗಳನು ಕರಿಗಳಿಂ ।
ಅರೆದ ವೀರನಿಗೆ ಸುರನರರು ಸರಿಯೇ ।೨।
ಕುರುಪ ಗರಳವನಿಕ್ಕೆ ನೆರೆಯುಂಡು ತೇಗುತಲಿ ।
ಉರಗಗಳ ಮೇಲ್ಬಿಡಲು ಅವನೊರಸಿದ ।

ಅರಗಿನ ಮನೆಯಲಿ ಉರಿಯನಿಕ್ಕಿ ತಾ ಧೀರ ।
ಧರಿಸಿ ಜಾನ್ಹವಿಯಗೊಯ್ದು ತನ್ನನುಜರ । ೩ ।
ಅಲ್ಲಿದ್ದ ಬಕ ಹಿಡಿಂಬಕರೆಂಬ ರಕ್ಕಸರ ।
ನಿಲ್ಲದೊರೆಸಿದ ಲೋಕ ಕಂಟಕರನು ।
ಬಲ್ಲಿದಸುರರ ಗೆಲಿದು ದ್ರೌಪದಿಯ ಕರವಿಡಿದು ।
ಎಲ್ಲ ಸುಜನರಿಗೆ ಹರುಷವ ಬೀರಿದ । ೪ ।
ರಾಜಕುಲವಜ್ರನೆನಿಸಿದ ಮಾಗಧನ ಸೀಳಿ ।
ರಾಜಸೂಯ ಯಾಗವನು ಮಾಡಿಸಿದನು ।
ಅಜಿಯಲಿ ಕೌರವರ ಬಲವ ಸವರುವೆನೆಂದು ।
ಮೂಜಗವರಿಯೆ ಕಂಕಣ ಕಟ್ಟಿದ । ೫ ।
ಮಾನನಿಧಿ ದ್ರೌಪದಿಯ ಮನದಿಂಗಿತವನರಿತು ।
ದಾನವರ ಸವರಬೇಕೆಂದು ಬೇಗ ।
ಕಾನನವ ಪೊಕ್ಕು ಕಿರ್ಮೀರಾದಿಗಳ ತರಿದು ।
ಮಾನಿನಿಗೆ ಸೌಗಂಧಿಕವನಿತ್ತ । ೬ ।
ದುರುಳ ಕೀಚಕನು ದ್ರೌಪದೀದೇವಿ ಚೆಲ್ವಿಕೆಗೆ ।
ಮರುಳಾಗಿ ಕರೆಕರೆಯ ಮಾಡಲವನ ।
ಗರಡಿಮನೆಯೊಳು ಬರಿಸಿ ಒರೆಸಿ ಅವನನುಜರ ।
ಕುರುಪನಟ್ಟಿದ ಮಲ್ಲ ಕುಲವ ಸದೆದ । ೭ ।
ವೈರಿದುಶ್ಯಾಸನನ ತೊಡೆಯಮೇಲಡ್ಡಗೆಡಹಿ ।
ವೀರ ನರಹರಿಯ ಲೀಲೆಯ ತೋರಿದ ।
ಕೌರವರ ಬಲ ಸವರಿ ವೈರಿಗಳ ನೆಗ್ಗುತ್ತ ।
ಓರಂತೆ ಕೌರವರನ್ನೆಲ್ಲ ತರಿದ । ೮ ।
ಗುರುಸುತನು ಸಂಗರದಿ ನಾರಾಯಣಾಸ್ತ್ರ ಬಿಡೆ ।
ಉರವಣಿಸಿ ಬರಲು ಶಸ್ತ್ರವ ಬಿಸುಡದೆ ।
ಹರಿಯ ಕೃಪಾ ಪಡೆದಿದ್ದ ಭೀಮ ಹುಂಕಾರಗೈದು ।
ಎರಗದಲೆ ದಿವ್ಯಾಸ್ತ್ರ ನೆರೆ ಅಟ್ಟಿದ । ೯ ।

ನಾರಿರೋದನ ಕೇಳಿ ಮನಮರುಗಿ ಗುರುಸುತನ ।
ಹಾರ್ ಹಿಡಿದು ಶಿರೋರತ್ನ ಕಿತ್ತಿ ತೆಗೆದ ।
ನೀರೊಳಡಗಿದ್ದ ದುರ್ಯೋಧನನ ಹೊರಗೆಡಹಿ ।
ಉರುಧ್ವಯುವ ತನ್ನ ಗದೆಯಿಂದ ಮುರಿದ ।೧೦ ।
ಚಂಡ ವಿಕ್ರಮನ್ನ ಗದೆಗೊಂಡು ರಣದೊಳಗೆ ಭೂ-
ಮಂಡಲದೊಳುದ್ಭವಿಸಿದಖಿಳ ಖಳರ ।
ಹಿಂಡಿ ಬಿಸುಟಿದ ವೃಕೋದರನ ಪ್ರತಾಪವನು ।
ಕಂಡು ನಿಲ್ಲುವರಾರು ತ್ರಿಭುವನದೊಳಗೆ । ೧೧ ।
ತುಂಗಕುಲಗುರುವರನ ಹೃತ್ಕಮಲದೊಳು ನೆಲೆಸಿ ।
ಭಂಗವಿರದ ಸುಖವ ಸುಜನಕ್ಕೆಲ್ಲ ।
ಹಿಂಗದೆ ಕೊಡುವ ಗುರುಮಧ್ವಾಂತರ್ಯಾಮಿ ।
ಶ್ರೀರಂಗವಿಟ್ಠಲನೆಂದು ನೆರೆನಂಬಿರೋ । ೧೨ ।

**Collection by Narahari Sumadhwa**